**CW :6**
PW : 5

## ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.229/2023

ಸಾಕ್ಷಿದಾರರ ಹೆಸರು : ಶೇಶಪ್ಪ ನಾಯಕ
ತಂದೆಯ ಹೆಸರು : ಚಂದ್ರು ನಾಯಕ
ಪ್ರಾಯ : 45 ವರ್ಷ
ಉದ್ಯೋಗ ಕೂಲಿ
ವಾಸಸ್ಥಳ : ಮುಂಡೂರು ಗ್ರಾಮ
ದಿನಾಂಕಃ **1.07.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಗೆ ನಿಪಿ**2** ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದು್ದ, ಸಾಕ್ಷಿಯ ಸಹಿಯನ್ನು ನಿಪಿ**2**ಬಿ ಎಂದು ಗುರುತಿಸಲಾಯಿತು.

ದಿ**.11.04.2022** ರಂದು ಚಾಸಾ**1**ರವರ ಮನೆಯ ಅಂಗಳದಲ್ಲಿ ನಿಪಿ**2**ಕ್ಕೆ ನಾನು ಸಹಿ ಮಾಡಿದ್ದೇನೆ. ಪೋಲಿಸರು ಅಲ್ಲಿಗೆ ಸ್ಥಳ ಮಹಜರ ಮಾಡಲು ಬಂದಿದ್ದರು. ಪೋಲಿಸರು ಒಳಗೆ ಬಂದು ನಮಗೆ ಗಲಾಟೆ ಮಾಡಿರುವ ಸ್ಥಳವನ್ನು ತೋರಿಸಿದರು. ನನ್ನ ಸಂಗಡ ಲೋಕಯ್ಯ ನಾಯಕ ಎನ್ನುವವರು ಕೂಡಾ ನಿಪಿ**2**ಕ್ಕೆ ಸಹಿ ಮಾಡಿದ್ದಾರೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಗಿದೆ.)

ಪಾಟಿ ಸವಾಲು ಮಾನ್ಯ ಸ.ಸ.ಅ ರವರಿಂದಃ

ನಾನು ಹೇಳಿದ ದಿನದಂದು ಚಾಸಾ1 ರವರು ಪೊಲಿಸರಿಗೆ ಆರೋಪಿತರು ಗಲಾಟೆ ಮಾಡಿದ ಸ್ಥಳವನ್ನು ಹಾಗೂ ಆರೋಪಿತರು ಬಂದಿದ್ದ ಕಾರುಗಳು ನಿಂತಿದ್ದ ಸ್ದಳವನ್ನು ತೋರಿಸಿದ್ದರು ಎಂದರೆ ಸರಿ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ ಪಿ ಕೆ ವಕೀಲರಿಂದಃ

ನಾನು ದಿನಾಲೂ ಚಾಸಾ**1**ರವರಲ್ಲಿ ಕೆಲಸಕ್ಕೆ ಹೋಗುತ್ತೇನೆ. ಪೊಲಿಸರು ಬಂದಾಗ ನಾನು ಅಂಗಳದಿಂದ ಸುಮಾರು ಅರ್ಧ ಕಿ ಮಿ ದೂರದಲ್ಲಿ ಕೆಲಸ ಮಾಡುತ್ತಿದ್ದೆ. ನನ್ನನು ಸಹಿ ಮಾಡಲು ಬರಬೇಕು ಎಂದು ಪೊಲಿಸರು ಕರೆದರು. ಪೊಲಿಸರು ನನ್ನನ್ನು **10.30**ರ ಸಮಯದಲ್ಲಿ ಸಹಿ ಹಾಕಲು ಕರೆದರು.

**CW :6**
PW : 5

**10.30** ಕ್ಕೂ ಮೊದಲು ಪೊಲೀಸರು ಏನೆಲ್ಲಾ ಮಾಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನೆಲ್ಲಾ ಬರೆದಿದ್ದ ಎನ್ನುವ ನಿಖರ ಮಾಹಿತಿ ನನಗೆ ಇಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.